ದಿ: 23-03-2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಸತೀಶ್ ಕೆ.)**:

3. ಪೊಲೀಸ್ ಅಧೀಕ್ಷಕರ ಅನುಮತಿಯನ್ನು ಪಡೆದುಕೊಂಡು ಹರಿಹರ ಗ್ರಾಮಾಂತರ ಠಾಣೆಯ ಎಸ್.ಹೆಚ್.ಓ. ರವರಿಗೆ ದೂರವಾಣಿ ಮುಖಾಂತರ ದಿನಚರಿಯಲ್ಲಿ ನಮೂದು ಮಾಡಲು ತಿಳಿಸಿರುತ್ತೇನೆ. ನಂತರ ಪ್ರಕರಣದ ತನಿಖೆಗಾಗಿ ಇಬ್ಬರು ಪಂಚರನ್ನು ಕಳುಹಿಸಿಕೊಡಲು ನಗರ ಸಭೆ ಅಧಿಕಾರಿಗಳಿಗೆ ಮನವಿ ಮಾಡಿರುತ್ತೇನೆ ಮತ್ತು ತಹಶೀಲ್ದಾರ, ಹರಿಹರ ಇವರಿಗೆ ಪತ್ರಾಂಕಿತ ಅಧಿಕಾರಿಯಾಗಿ ಪಂಚನಾಮೆಗೆ ಸಹಕರಿಸಲು ಮನವಿಯನ್ನು ಸಲ್ಲಿಸಿರುತ್ತೇನೆ. ನಂತರ ಅದೇ ದಿನ ಮಧ್ಯಾಹ್ನ 12.00 ಗಂಟೆಗೆ ಠಾಣಾಧಿಕಾರಿಗಳು ಗ್ರಾಮಾಂತರ ಪೊಲೀಸ್ ಠಾಣೆರವರಿಗೆ ಅಕ್ರಮ ಗಾಂಜಾ ಸೊಪ್ಪನ್ನು ಮಾರಾಟ ಮಾಡುತ್ತಿರುವ ಬಗ್ಗೆ ದೂರನ್ನು ನೀಡಿರುತ್ತೇನೆ.

ಈ ಹಂತದಲ್ಲಿ ದೂರಿನ ಮೂಲ ದಾಖಲೆಗಳು ಕಡತದಲ್ಲಿ ಲಭ್ಯ ಇಲ್ಲದೇ ಇರುವುದರಿಂದ ಮತ್ತು Spl.C.NDPS.9/2020 ರಲ್ಲಿ ಲಭ್ಯ ಇರುವುದರಿಂದ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.